ಆ) ಹಾಗಿದ್ದರೆ, ಈ ಯೋಜನೆಯ ಅಂದಾಜು ವೆಚ್ಚ ಎಷ್ಟು; ಈ ಕೆಲಸದ ಗುತ್ತಿಗೆಯನ್ನು ಯಾರಿಗೆ ವಹಿಸಿಕೊಡಲಾಗಿದೆ?

ಇ) ಪ್ರಸಕ್ತ ವರ್ಷದ ಮುಂಗಡ ಪತ್ರದಲ್ಲಿ ಇದಕ್ಕಾಗಿ ಕಾಯ್ದಿರಿಸಲಾದ ಹಣ ಎಷ್ಟು; ಹಾಗೂ ಯಾವಾಗ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಆ) ಇದೆ.

ಆ) ಈ ಯೋಜನೆಯ ಅಂದಾಜು ವೆಚ್ಚ ರೂ. 110.00 ಲಕ್ಷಗಳು. ಈ ಕೆಲಸದ ಗುತ್ತಿಗೆಯನ್ನು ಮೇ: ರಾಯಲ್ ಸೀಮಾ ಕನ್ಸಟ್ರಕ್ಷನ್ ಕಂಪನಿ, ಕಡಪಾ, ಆಂಧ್ರ ಪ್ರದೇಶ ಇವರಿಗೆ ವಹಿಸಿಕೊಡಲಾಗಿದೆ.

ಇ) ಪ್ರಸಕ್ತ 1998-99ನೇ ಆಯವ್ಯಯದಲ್ಲಿ ರೂ. 1.00 ಲಕ್ಷ ಅನುದಾನ ಕಾಯ್ದಿರಿಸಲಾಗಿದೆ. ಈ ಕೆಲಸವನ್ನು ಗುತ್ತಿಗೆಯ ಕರಾರಿನಂತೆ ದಿನಾಂಕ: 13-7-2000 1ರಂದು ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ರೋಗಗ್ರಸ್ತ ಕಾರ್ಖಾನೆಗಳ ಪುನಶ್ಚೇತನ

3008:(3969)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು? ಅದರಿಂದ ಉದ್ಯೋಗ ಪಡೆದ ಕಾರ್ಮಿಕರ ಸಂಖ್ಯೆ ಎಷ್ಟು?

2. ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಮುಚ್ಚಿರುವ ರೋಗಗ್ರಸ್ಥ ಕಾರ್ಖಾನೆಗಳ ಸಂಖ್ಯೆ ಎಷ್ಟು; ಯಾವ ಯಾವ ಕಾರಣಗಳಿಗಾಗಿ ಈ ಕಾರ್ಖಾನೆಗಳನ್ನು ಮುಚ್ಚಲಾಗಿದೆ. ಇದರಿಂದ ಕೆಲಸ ಕಳೆದಕೊಂಡ ಕಾರ್ಮಿಕರ ಸಂಖ್ಯೆ ಎಷ್ಟು?

3. ಮೈಸೂರು ಜಿಲ್ಲೆಯಲ್ಲಿ ಒಂದು ದಶಕದಿಂದ ಮುಚ್ಚಿರುವ ಕಾರ್ಖಾನೆಗಳ ಸಂಖ್ಯೆ

ಎಷ್ಟು; ಅದರಿಂದ ನಿರುದ್ಯೋಗಿಗಳಾದ ಕಾರ್ಮಿಕರ ಸಂಖ್ಯೆ ಎಷ್ಟು?

4. ರೋಗಗ್ರಸ್ಥ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು, ಅದರಿಂದ ಆಗಿರುವ ಪ್ರಗತಿಗಳೇನು?

ಶ್ರೀ ಹೆಚ್.ಶಿವಪ್ಪ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಯೋಜನೆಗಳ ರಾಜ್ಯ ಸಚಿವರು):

1. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಒಟ್ಟು 265 ಹಾಗೂ 1,19,356 ಕಾರ್ಮಿಕರು ಉದ್ಯೋಗಾವಕಾಶ ಪಡೆದುಕೊಂಡಿರುತ್ತಾರೆ.

2. ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಸುಮಾರು 42 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ರೋಗಗ್ರಸ್ಥವಾಗಿ ಮುಚ್ಚಲ್ಪಟ್ಟಿರುತ್ತವೆ. ದುಡಿಮೆ ಬಂಡವಾಳದ ಕೊರತೆ, ಮಾರುಕಟ್ಟೆ ತೊಂದರೆ, ವಿದ್ಯುತ್ ಕೊರತೆ ಹಾಗೂ ಇತರೆ ತೊಂದರೆಗಳಿಂದಾಗಿ ಕಾರ್ಖಾನೆಗಳನ್ನು ಮುಚ್ಚಲಾಗಿದೆ. ಇದರಿಂದ ಸುಮಾರು 17,938 ಕಾರ್ಮಿಕರು ಕೆಲಸ ಕಳೆದುಕೊಂಡಿರುತ್ತಾರೆ.

3. ಮೈಸೂರು ಜಿಲ್ಲೆಯಲ್ಲಿ ಒಂದು ದಶಕದಿಂದ 20 ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ. ಇದರಿಂದ 7,688 ಕಾರ್ಮಿಕರು ನಿರುದ್ಯೋಗಿಗಳಾಗಿರುತ್ತಾರೆ.

4. ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನ ಮಾಡುವ ಉದ್ದೇಶದಿಂದ ರಾಜ್ಯ ಸರ್ಕಾರವು ಅನೇಕ ರಿಯಾಯಿತಿಗಳನ್ನು ಮತ್ತು ಪರಿಹಾರಗಳನ್ನು ಘೋಷಿಸಿದೆ. ಇದರ ಪ್ರಕಾರ ರೋಗಗ್ರಸ್ಥ ಕಾರ್ಖಾನೆಗಳಿಗೆ ಅಭಿವೃದ್ಧಿ ಸಾಲದ ಮುಂದೂಡಿಕೆ, ವಾಣಿಜ್ಯ ತೆರಿಗೆ ಬಾಕಿ ಮುಂದೂಡಿಕೆ, ವಿದ್ಯುಚ್ಚಕ್ತಿ ಕಡತದಿಂದ ಶೇಕಡಾ 50ರಷ್ಟು ವಿನಾಯಿತಿ ಕಾರ್ಮಿಕ ಸಂಘಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ನೆರವು ನೀಡುವುದು, ಹೆಚ್ಚಿನ ಭೂಮಿಯನ್ನು ಮಾರಾಟ ಮಾಡಿ ಕೈಗಾರಿಕಾ ಪುನಶ್ಚೇತನಕ್ಕಾಗಿ ಉಪಯೋಗಿಸಿಕೊಳ್ಳಲು ಅನುಮತಿ ನೀಡುವುದು ಮುಂತಾದವುಗಳು. ಈ ರಿಯಾಯಿತಿಗಳಿಂದ ಅನೇಕ ರೋಗಗ್ರಸ್ಥ ಕೈಗಾರಿಕಾ ಘಟಕಗಳು ಪ್ರಯೋಜನ ಪಡೆದು ಪುನಶ್ಚೇತನ-ಗೊಂಡಿವೆ.

ಕೆ.ಎ.ಎಸ್. ಅಧಿಕಾರಿಗಳಿಗೆ ಐ.ಎ.ಎಸ್.ದರ್ಜೆ ನೀಡುವ ಬಗ್ಗೆ.

3010:(3991):